**ತೆರುವುದು** ಎಂದರೆ ಶಿಸ್ತು, ಸಂಯಮಗಳನ್ನು ಚಾಚೂ ತಪ್ಪದೆ ಪಾಲಿಸುವುದು. ಅಣುಶಕ್ತಿಯೊಡನೆ ಚೆಲ್ಲಾಟವಾಡಿದರೆ ಅದು ಜಗತ್ತನ್ನೇ ಛಿದ್ರವಾಗಿಸೀತು. ಆದರೆ ಅದನ್ನೇ ಕ್ರಮವರಿತು ಬಳಸಿಕೊಂಡರೆ ಜಗತ್ತಿಗೇ ವರವಾದೀತು.

ಹಾಗೆಯೇ **ಧ್ಯಾನ** ಎನ್ನುವುದು ಒಂದು ಅದ್ಭುತ ಶಕ್ತಿ; ಇದು ಅಧ್ಯಾತ್ಮ ವಿಜ್ಞಾನ. ಸರಿಯಾಗಿ ಹೇಳಬೇಕೆಂದರೆ ಇದೇ ಅತ್ಯುತ್ತಮವಾದ ವಿಜ್ಞಾನ. ಇಂತಹ ಧ್ಯಾನವನ್ನು ಅಭ್ಯಾಸ ಮಾಡಿ ಸಿದ್ಧರಾಗಬೇಕೆನ್ನುವವರು, ಅದಕ್ಕೆ ಸಂಬಂಧಿಸಿದ ಸೂಕ್ಷ್ಮಾಂಶಗಳನ್ನು ಸರಿಯಾಗಿ ಕಲಿತುಕೊಳ್ಳಬೇಕು ಮತ್ತು ಅರಿತು ಅಭ್ಯಾಸ ಮಾಡಬೇಕು. ಆಗ ಸಿದ್ಧಿ ಕಟ್ಟಿಟ್ಟ ಬುತ್ತಿ!

**೫. ಅಪರಿಗ್ರಹ :** ಇತರರಿಂದ ಏನನ್ನೂ ಸ್ವೀಕರಿಸದಿರುವುದೇ ಅಪರಿಗ್ರಹ. ಉಡುಗೊರೆ, ಕಾಣಿಕೆಗಳನ್ನು ಸ್ವೀಕರಿಸಿದಾಗ ಸಾಧಕನ ಮನಸ್ಸು ನೀಡಿದವನ ಪ್ರಭಾವಕ್ಕೆ, ದಾಕ್ಷಿಣ್ಯಕ್ಕೆ ಒಳಗಾಗುತ್ತದೆ; ತನ್ಮೂಲಕ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತದೆ. ಧ್ಯಾನ ಮಾಡುವ ಮನಸ್ಸು ಈ ರೀತಿಯ ಪ್ರಭಾವಗಳಿಗೆ ಒಳಗಾಗದೆ ಸ್ವತಂತ್ರವಾಗಿರಬೇಕು. ಹಾಗೆಂದೇ ಅಪರಿಗ್ರಹದ ಪಾಲನೆ ಬಹಳ ಮುಖ್ಯವಾದುದು. ಇದುವರೆಗೆ ಹೇಳಿದುದು ಧ್ಯಾನದ ಒಂದು ಸ್ಥೂಲವಿಚಾರ. ಇದನ್ನು ತಿಳಿದು, ಆಚರಣೆಗೆ ತಂದು ಧನ್ಯರಾಗಲು ಸ್ವಾಮಿ ವಿವೇಕಾನಂದರ 'ರಾಜಯೋಗ'ವನ್ನು ಆಳವಾಗಿ ಅಧ್ಯಯನಮಾಡಬೇಕು. ✪



## ಬದುಕಿಗೊಂದು ಬೆಳಕು
### ಇಂತಹವರೂ ಇದ್ದರೇ?

ಆಧುನಿಕ ಜೀವನದ ಬೆಡಗು–ಬಿನ್ನಾಣ, ಥಳಕು–ಬೆಳಕು, ಆಡಂಬರಗಳನ್ನು ನೋಡಿದಾಗ ಮನಸ್ಸಿನ ತುಡಿತ ವೇಗವಾಗುತ್ತದೆ. ಈ ಬಗೆಯ ಜೀವನವು ಮಾನವನನ್ನು ನೆಮ್ಮದಿಯಿಂದ ಇಟ್ಟಿರಲು ಸಾಧ್ಯವೇ ಎನಿಸುತ್ತದೆ. ಸುಖಿಯಾದ ವ್ಯಕ್ತಿಯನ್ನು ಎಲ್ಲೆಲ್ಲೂ ಹುಡುಕುವಂತಾಗುತ್ತದೆ; ಏನೋ ಒಂದು ರೀತಿಯ ಕೊರತೆ ಎಲ್ಲರನ್ನೂ ಕಾಡುತ್ತಿರುತ್ತದೆ. ಒಬ್ಬ ವ್ಯಕ್ತಿಯು ಲೋಭದಿಂದ ಆತ್ಮತೃಪ್ತಿಯನ್ನು ಕಳೆದುಕೊಂಡು ಸಾಲ ಮಾಡುತ್ತಾನೆ; ಹಾಸಿಗೆ ಮೀರಿ ಕಾಲು ಚಾಚುತ್ತಾನೆ. ಸಮಾಜದ ಋಣ ಅವನ ಮೇಲಿರುತ್ತದೆ. 'ಸಾಲಗಾರ' ಎಂಬ ಕುಖ್ಯಾತಿಯನ್ನು ಪಡೆದುಕೊಂಡು ಜನರ ದೃಷ್ಟಿಯಲ್ಲಿ ಕೀಳೆನಿಸುತ್ತಾನೆ. ಆದರೆ ಹಿರಿಯರ, ಮಹಾತ್ಮರ ಜೀವನದ ಘಟನೆಗಳನ್ನು ಓದಿ, ಕೇಳಿ, ಈ ಬಗೆಯ ಬದುಕನ್ನು ಪರಿವರ್ತಿಸಿಕೊಳ್ಳಲು ಅವಕಾಶವಿದೆ. ಅಂತಹ ಒಬ್ಬ ಮಹಾನುಭಾವನ ಕತೆಯನ್ನು ಬಹಳ ಹಿಂದೆ ಓದಿದ್ದು, ಪುನಃ ನೆನಪಿಸಿಕೊಳ್ಳುವ ಸದವಕಾಶ ಈಗ ಒದಗಿಬಂದಿದೆ. ಅದನ್ನು ಓದುಗರೊಡನೆ ಹಂಚಿಕೊಂಡು ಮನಸ್ಸಿಗೆ ಶಾಂತಿ ತಂದುಕೊಳ್ಳುವ ಹಂಬಲದಿಂದ ಬರೆಯಬೇಕೆನಿಸಿತು, ಬರೆದಿದ್ದೇನೆ.

ಬಾಗ್ದಾದಿನ ಎರಡನೇ ಖಲೀಫನಾಗಿದ್ದ ಹಜರತ್ ಉಮರ್ ಬಹಳ ಸರಳಜೀವಿ. ಅವನು ರಾಜ್ಯಕೋಶದಿಂದ ತನ್ನ ಕುಟುಂಬ ನಿರ್ವಹಣೆಗಾಗಿ ಕೇವಲ ಇಪ್ಪತ್ತು ರೂಪಾಯಿಗಳನ್ನು ಪ್ರತಿ ತಿಂಗಳೂ ಪಡೆಯುತ್ತಿದ್ದ. ತನ್ನ ಬಟ್ಟೆ ಹರಿದಿದ್ದ ಜಾಗದಲ್ಲಿ, ಪುನಃ ಆ ಜಾಗ ಹರಿಯದಿರಲೆಂದು, ಚರ್ಮವನ್ನು ಇಟ್ಟು ತಾನೇ ಹೊಲಿದುಕೊಳ್ಳುತ್ತಿದ್ದ. ತನ್ನ ಪಾದರಕ್ಷೆಗಳನ್ನು ತಾನೇ ತಯಾರಿಸಿಕೊಳ್ಳುತ್ತಿದ್ದ. ಅವನ ತಲೆದಿಂಬು ಅಂದರೆ ಒಂದು ಇಟ್ಟಿಗೆ ! ಆದರೆ ಅವನಿಗೆ ಸಂತೋಷ, ನೆಮ್ಮದಿ ಇತ್ತು. ಖಲೀಫನಾದರೂ ಅಂತಸ್ತು ಆಡಂಬರಗಳಿಂದ ದೂರವಿದ್ದ. ಖಲೀಫನ ಹುದ್ದೆಯೆನ್ನುವುದು ಜನಸೇವೆಗೆ ಸದವಕಾಶವೆನ್ನುವ ಭಾವನೆ ಅವನಿಗಿತ್ತು. ಅವನ ಕುಟುಂಬದವರ ಊಟ, ಉಡುಗೆ – ಎಲ್ಲವೂ ಸರಳವೇ ! ಇವನ ಮಕ್ಕಳ ಬಟ್ಟೆ ಬರೆ ನೋಡಿ ಇತರ ಹುಡುಗರು ಗೇಲಿ ಮಾಡುತ್ತಿದ್ದರು. ಹಜರತ್‌ಗೆ ಇದಾವುದರ ಪರಿವೆಯೂ ಇರಲಿಲ್ಲ.

ಒಮ್ಮೆ ಖಲೀಫನ ಒಬ್ಬ ಮಗ ತನ್ನ ಜೊತೆಯ ಹುಡುಗರಿಂದ ಆಗುತ್ತಿದ್ದ ಕೀಟಲೆ, ಅಪಮಾನಗಳನ್ನು ಸಹಿಸಲಾರದೆ, ಅಪ್ಪನನ್ನು ಕಂಡು ಹೊಸ ಬಟ್ಟೆ ಹೊಲಿಸಿಕೊಳ್ಳಲು ಹಣವನ್ನು ಕೇಳಿದನು. ಅ ಹುಡುಗನ ಅಳು, ಅಂಗಲಾಚುತ್ತಿರುವ ರೀತಿ ಎಂಥವರ ಕಲ್ಲೆದೆಯನ್ನೂ ಕರಗಿಸುವಂತಿತ್ತು. ಇದರಿಂದ ಖಲೀಫನ ಸರಳ ಜೀವನದ ಕಠಿಣತೆ ಕೂಡ ಕರಗಿ ಮೆದುವಾಯಿತು. ಅವನು ತನ್ನ ಕೋಶಾಧ್ಯಕ್ಷನನ್ನು ಕರೆಸಿ ಹುಡುಗನಿಗೆ ಎರಡು ರೂಪಾಯಿಗಳನ್ನು ತನ್ನ ಸಂಬಳದ ಮುಂಗಡವಾಗಿ ಕೊಡುವಂತೆ ತಿಳಿಸಿದನು. ಆ ಅಧಿಕಾರಿ ಹಣದ ಲೆಕ್ಕಾಚಾರದಲ್ಲಿ ಖಲೀಫನಿಗಿಂತಲೂ ಖಂಡಿತವಾದಿ. ಅವನು ಹೀಗೆ ಹೇಳಿದ: "ಕ್ಷಮಿಸಬೇಕು, ಹಣವನ್ನು ಮುಂಗಡವಾಗಿ ಕೊಡಲು ಸಾಧ್ಯವಿಲ್ಲ. ಏಕೆಂದರೆ ಸಾವೆನ್ನುವುದು ಧರ್ಮದೇವತೆ. ಯಾವಾಗ ಬದುಕಿನಲ್ಲಿ ಅದು ಬಂದೊದಗುವುದೋ ಅದನ್ನು ತಿಳಿಯಲು ಅಸಾಧ್ಯ. ಅದು ಮುಂದಿನ ಗಳಿಗೆ ಆಗಬಹುದು, ನಾಳೆ ಅಥವಾ ಇನ್ನೂ ದೀರ್ಘಕಾಲವೂ ಆಗಬಹುದು. ಕಡ ತೀರಿಸದೆ ಮೃತರಾದರೆ ನೀವು ಮುಂಗಡ ಪಡೆದ ಸಾಲಗಾರರಾಗುತ್ತೀರಿ. ಪ್ರಜೆಗಳು ನಿಮ್ಮ ಬೆನ್ನ ಹಿಂದೆ, 'ಖಲೀಫರು ಸಾಲಗಾರರು' ಎಂದು ಮಾತಾಡಿಕೊಳ್ಳುವುದನ್ನು ನಾನು ಸಹಿಸಲಾರೆ. ನಿಮ್ಮಂತಹವರಿಗೆ ಇದು ತಕ್ಕುದಲ್ಲ. ಇದಕ್ಕೆ ನನ್ನ ಒಪ್ಪಿಗೆಯಿಲ್ಲ." ಈ ಮಾತು ಹಜರತ್‌ನ ಮನದಾಳಕ್ಕೆ ಹೊಕ್ಕಿತು. ಅವನು ಕೋಶಾಧ್ಯಕ್ಷನ ಪ್ರಾಮಾಣಿಕತೆ ಹಾಗೂ ದೂರಾಲೋಚನೆಯನ್ನು ಮೆಚ್ಚಿದನು. ಮಗನನ್ನು ಸಮಾಧಾನಪಡಿಸುತ್ತಾ, ಮುಂದಿನ ಸಂಬಳದಲ್ಲಿ ಹೊಸಬಟ್ಟೆ ಕೊಡಿಸುವುದಾಗಿ ಭರವಸೆ ಇತ್ತನು.

ಸಮಾಜದಲ್ಲಿ ಪ್ರತಿಯೊಬ್ಬರಿಗೂ ಕೆಲವು ಋಣಗಳನ್ನು ತೀರಿಸಲೇಬೇಕಾದ ಕರ್ತವ್ಯವಿದೆ. ಆ ಋಣಗಳಿಂದ ನಾವು ಮುಕ್ತರಾಗಬೇಕು. ಇದೇ ಧರ್ಮ. ಆಡಂಬರಕ್ಕಾಗಿ ಸಾಲ ಮಾಡಿ ಋಣಿ ಎನ್ನುವ ಪಟ್ಟ ಏಕೆ ತಾನೇ ಕಟ್ಟಿಕೊಳ್ಳಬೇಕು? ಇದೇ ಮಹಾತ್ಮರ ಸರಳಜೀವನ ನಮಗೆ ತೋರಿಸುವ ಮಾರ್ಗ. (ಹಿಂದಿ ಮೂಲ: *ಶರತ್‌ಚಂದ್ರ ಪೆಂಡಾರ್‌ಕರ್*, ಅನುವಾದ: *ಸಿ.ಎಸ್. ಮಂಗಳಮ್ಮ*) ✪

ಸ್ವಾಮಿ ವಿವೇಕಾನಂದರ ೧೫೦ನೇ ಜನ್ಮದಿನೋತ್ಸವವನ್ನು ಇಂದು ಎಲ್ಲೆಡೆ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ಈ ಉತ್ಸವವು ೨೦೧೧ ರ ಜನವರಿ ೧೨ರಂದು ನವದೆಹಲಿಯಲ್ಲಿ ಅಧಿಕೃತವಾಗಿ ಉದ್ಘಾಟನೆಗೊಂಡಿತು. ಈ ಸಂದರ್ಭದಲ್ಲಿ ಭಾರತದ ಮಾನ್ಯ ಪ್ರಧಾನಮಂತ್ರಿಗಳು ಮಾಡಿದ ಭಾಷಣವನ್ನು ಹಲವಾರು ಭಾಷೆಗಳಲ್ಲಿ ಭಾರತ ಸರ್ಕಾರದವರು ಪ್ರಕಟಿಸಿದ್ದಾರೆ. ಅವುಗಳಲ್ಲಿ ಕನ್ನಡ ಅನುವಾದವನ್ನು 'ವಿವೇಕಪ್ರಭ' ಪತ್ರಿಕೆಯ ಓದುಗರ ಮುಂದೆ ಇಡುತ್ತಿದ್ದೇವೆ.

# ಸ್ವಾಮಿ ವಿವೇಕಾನಂದರ ಸಂದೇಶ

ಡಾ. ಮನಮೋಹನ್ ಸಿಂಗ್

**ಸ್ವಾ**ಮಿ ವಿವೇಕಾನಂದರ ಜನ್ಮದಿನದ ೧೫೦ನೆಯ ವಾರ್ಷಿಕೋತ್ಸವದ ನಾಲ್ಕು ವರ್ಷಗಳ ಅವಧಿಯ ಆಚರಣೆಯ ಉದ್ಘಾಟನೆಯಲ್ಲಿ ಇಲ್ಲಿ ಹಾಜರಿರಲು ನನಗೆ ಬಹಳ ಗೌರವವೆನಿಸುತ್ತದೆ.

**ಚಿಕಾಗೊ ಭಾಷಣ :** ೧೮೯೩ರ ಸೆಪ್ಟೆಂಬರ್ ತಿಂಗಳ ಒಂದು ದಿನ ಹಿಂದೂ ಸಂನ್ಯಾಸಿಯ ಸಾಂಪ್ರದಾಯಿಕ ಕಾವಿಬಟ್ಟೆ ಧರಿಸಿದ್ದ ಭಾರತದ ತರುಣರೊಬ್ಬರು ಚಿಕಾಗೊದಲ್ಲಿ ಧರ್ಮಗಳ ಸಂಸತ್ತನ್ನುದ್ದೇಶಿಸಿ ಭಾಷಣ ಮಾಡಿದರು. ಅವರು ಪ್ರಥಮಬಾರಿಗೆ ವಿದೇಶಕ್ಕೆ ಹೋಗಿದ್ದರು ಹಾಗೂ ಮೊದಲಬಾರಿಗೆ ಸಾರ್ವಜನಿಕ ಸಭೆಯಲ್ಲಿ ಮಾತನಾಡುತ್ತಿದ್ದರು. **"ಅಮೆರಿಕದ ಸೋದರಿಯರೇ, ಸೋದರರೇ"** ಎಂದು ಅವರು ತಮ್ಮ ಮಾತುಗಳನ್ನು ಪ್ರಾರಂಭಿಸಿದಾಗ, ಸಭಿಕರಲ್ಲಿ ವಿದ್ಯುತ್ ಸಂಚಾರವಾದಂತಾಯಿತು ಹಾಗೂ ಎರಡು ನಿಮಿಷಗಳಿಗೂ ಹೆಚ್ಚು ಕಾಲ ಕರತಾಡನ ಮಾಡಿ ಅವರೆಲ್ಲ ತಮ್ಮ ಮೆಚ್ಚುಗೆ ಸೂಚಿಸಿದರು.

ಸ್ವಾಮಿ ವಿವೇಕಾನಂದರ ಚಿಕಾಗೊ ಭಾಷಣವು ಭಾರತದ ಇತಿಹಾಸದಲ್ಲಿ ಒಂದು ಹೆಮ್ಮೆಯ ಘಳಿಗೆಯಾಗಿದೆ. ಭಾರತದ ಅತ್ಯುನ್ನತ ಆಧ್ಯಾತ್ಮಿಕ ನಾಯಕರಲ್ಲಿ ಒಬ್ಬರು ವಿಶ್ವದ ವೇದಿಕೆಯ ಮೇಲೆ ಪ್ರವೇಶಿಸಿದ್ದನ್ನು ಅದು ಸಾರಿತು.

ಸ್ವಾಮಿ ವಿವೇಕಾನಂದರು ತಮ್ಮ ಜೀವನವನ್ನು ತಾಯ್ನಾಡಿನ ಸೇವೆಗೆ ಹಾಗೂ ಭಾರತದ ಜನತೆಯ ಆಧ್ಯಾತ್ಮಿಕ ಜಾಗೃತಿಗೆ ಮುಡುಪಾಗಿಟ್ಟರು. ತಮ್ಮ ಸಾಂಸ್ಕೃತಿಕ ಪರಂಪರೆಯ ಬಗ್ಗೆ ದೇಶವಾಸಿಗಳಲ್ಲಿ ಹೆಮ್ಮೆಯನ್ನುಂಟುಮಾಡಲು ಅವರು ಶ್ರಮಿಸಿದರು. ಆಧುನಿಕ, ವಿವೇಚನಾಯುಕ್ತ ಮತ್ತು ಸಾರ್ವತ್ರಿಕ ರಾಷ್ಟ್ರೀಯಪ್ರಜ್ಞೆಯನ್ನು ಮೂಡಿಸಲು ಅವರು ಪ್ರಯತ್ನಿಸಿದರು.

ತಮ್ಮ ಮಾತು ಮತ್ತು ಕೃತಿಗಳಿಂದ ನಮ್ಮ ದೇಶದ ಹಾಗೂ ವಿದೇಶಗಳ ಲಕ್ಷಾಂತರ ಜನರಿಗೆ ಸ್ಫೂರ್ತಿ ನೀಡಿದ ಭಾರತದ ಈ ಶ್ರೇಷ್ಠಪುತ್ರನ ಗುಣಗಾನ ಮಾಡುವುದು ನನಗೊಂದು ದೊಡ್ಡ ಗೌರವ.

**ಸ್ವಾಮೀಜಿಯವರ ತತ್ತ್ವಜ್ಞಾನ:** ಸ್ವಾಮಿ ವಿವೇಕಾನಂದರ ಉಡುಪು ಒಬ್ಬ ಸಂನ್ಯಾಸಿಯ ಉಡುಪು. ಹಾಗೆಯೇ ಅವರ ಪ್ರವೃತ್ತಿ ಒಬ್ಬ ಧಾರ್ಮಿಕ ನಾಯಕನ ಗಾಢವಾದ ಆಧ್ಯಾತ್ಮಿಕ ಚಿಂತನ ಪ್ರವೃತ್ತಿಯಾಗಿತ್ತು. ಆದರೆ ಅವರು ಒಬ್ಬ ಸಾಮಾನ್ಯ ವ್ಯಕ್ತಿಯಾಗಿರಲಿಲ್ಲ; ಕೇವಲ ಲೌಕಿಕತ್ಯಾಗದ ಜೀವನಕ್ಕೆ ತಮ್ಮನ್ನು ಸೀಮಿತಗೊಳಿಸುವುದಕ್ಕೆ ಅವರ ಬುದ್ಧಿಮತ್ತೆ ಮತ್ತು ಉತ್ಸಾಹ ಅವರನ್ನು ಬಿಡಲಿಲ್ಲ. ಸ್ವಾಮಿ ವಿವೇಕಾನಂದರು ಸದಾ ಜನರೊಂದಿಗೆ ಒಡನಾಡಿದರು ಹಾಗೂ ಅವರ ಕ್ಷೇಮ ಮತ್ತು ಒಳಿತಿಗಾಗಿ ಅವರು ಶ್ರಮಿಸಿದರು. ಅವರು ದೇಶದ ಉದ್ದಗಲಕ್ಕೂ ಸಂಚರಿಸಿದರು ಹಾಗೂ ತಮ್ಮ ಬೋಧನೆಗಳಲ್ಲಿ ದುಡಿಮೆಯ ಪ್ರಾಮುಖ್ಯತೆಯನ್ನೂ ಹಾಗೂ ಜನತೆಗೆ ಬದ್ಧವಾಗಿರುವುದನ್ನು ಒತ್ತಿ ಹೇಳುವ ಮೂಲಕ, ಭಾರತದ ಧಾರ್ಮಿಕ ಚಿಂತನೆಯನ್ನು ಶ್ರೀಮಂತಗೊಳಿಸಲು ಬಯಸಿದರು.

ಜನರೊಂದಿಗೆ, ಅದರಲ್ಲೂ ಯುವಜನರೊಂದಿಗೆ, ನೇರವಾಗಿ ಮಾತನಾಡುವ ಮೂಲಕ ತಮ್ಮ ವಿಚಾರಗಳನ್ನು ಹರಡಲು ವಿವೇಕಾನಂದರು ಪ್ರಯತ್ನಿಸಿದರು. ಆತ್ಮಗೌರವದ ಕೊರತೆಯೇ ಭಾರತದ ದೌರ್ಬಲ್ಯಕ್ಕೆ ಮೂಲ ಕಾರಣ ಎಂದು ಅವರು ನಂಬಿದ್ದರು. ಆತ್ಮಗೌರವವನ್ನು ಬೆಳೆಸಿಕೊಳ್ಳಬೇಕೆಂದು ಅವರು ಜನರನ್ನು ಆಗ್ರಹಿಸಿದರು. ಸ್ವತಃ ಭಾರತೀಯನಾಗಿರುವ ಬಗ್ಗೆ ಹಾಗೂ ಪ್ರತಿಯೊಬ್ಬ ಭಾರತೀಯನೂ ತನ್ನ ಸೋದರ ಅಥವಾ ಸೋದರಿ ಎಂದು ಹೇಳಲು, ಎಲ್ಲ ಭಾರತೀಯರೂ ಹೆಮ್ಮೆಪಡಬೇಕು ಎಂದು ಅವರು ಇಚ್ಛಿಸಿದರು. ಅವರ ಸಂದೇಶವು ಜಾತಿ ಮತ್ತು ಮತಗಳ ಸಂಕೋಲೆಗಳನ್ನು ಮುರಿದು, ವಿಶ್ವಭ್ರಾತೃತ್ವದ ಭಾಷೆಯಲ್ಲಿ ಮೂಡಿಬಂದ ಅಪೂರ್ವ ಸಂದೇಶವಾಗಿತ್ತು.

೧೯೨೧ ರಲ್ಲಿ ಮಹಾತ್ಮ ಗಾಂಧಿಯವರು ಬೇಲೂರು ಮಠಕ್ಕೆ ಭೇಟಿ ನೀಡಿದಾಗ ಸ್ವಾಮಿ ವಿವೇಕಾನಂದರ ಬಗ್ಗೆ ಹೀಗೆನ್ನುತ್ತಾರೆ: "ಅವರ ಕೃತಿಗಳನ್ನು ನಾನು ಆಮೂಲಾಗ್ರವಾಗಿ ಅಧ್ಯಯನ ಮಾಡಿದ್ದೇನೆ ಹಾಗೂ ಹೀಗೆ ಪರಿಶೀಲಿಸಿದ ನಂತರ ನನ್ನ ದೇಶದ ಬಗ್ಗೆ ನನಗಿದ್ದ ಪ್ರೀತಿ ಸಾವಿರ ಪಟ್ಟು ಹೆಚ್ಚಾಗಿದೆ."



ಸ್ವಾಮಿ ವಿವೇಕಾನಂದರ ವಿಚಾರಗಳು ಮತ್ತು ಆದರ್ಶಗಳನ್ನು ನಮ್ಮ ದೇಶದ ಯುವಜನರಲ್ಲಿಂದು ಹರಡಬೇಕಾದ ಪ್ರಾಮುಖ್ಯತೆ ಗಾಂಧೀಜಿಯವರು ಹೇಳಿದ ಮಾತುಗಳಲ್ಲಿ ಅಡಗಿದೆ. ವಿವೇಕಾನಂದರು ಯುವಜನರ ಪಾಲಿಗೆ ಚಿರಂತನ ಚೈತನ್ಯವಾಗಿದ್ದಾರೆ ಹಾಗೂ ಸತ್ಯಕ್ಕಾಗಿನ ಅವರ ಅವಿರತ ಶೋಧನೆಯ ಸಾಕಾರ ಮೂರ್ತಿಯಾಗಿದ್ದಾರೆ. ಸ್ವಾಮಿ ವಿವೇಕಾನಂದರ ಜನ್ಮದಿನವಾದ ಜನವರಿ ೧೨ ನೆಯ ದಿನಾಂಕವನ್ನು **'ರಾಷ್ಟ್ರೀಯ ಯುವಜನರ ದಿನ'** ಎಂದು ಭಾರತ ಸರ್ಕಾರ ಘೋಷಿಸಿರುವುದು ಅತ್ಯಂತ ಸಮರ್ಪಕವಾಗಿದೆ. ಭಾರತದ ಈ ಮಹಾನ್ ದೇಶಪ್ರೇಮಿ ಹಾಗೂ ಸಂತಪುತ್ರನ ಚಿರಂತನ ಸಂದೇಶವು ಪುನಃ ಪ್ರಜ್ವಲಿಸುವಂತೆ ಮಾಡಲು ನಾವು ಶ್ರಮಿಸಬೇಕಾಗಿದೆ.

**ರಾಮಕೃಷ್ಣ ಮಠ:** ತಮ್ಮ ವಿಚಾರಗಳನ್ನು ಕಾರ್ಯರೂಪಕ್ಕೆ ತರಲು ಸ್ವಾಮಿ ವಿವೇಕಾನಂದರು ಸ್ಥಾಪಿಸಿದ ರಾಮಕೃಷ್ಣ ಮಠ, ಜನತೆಯ ಕ್ಷೇಮಕ್ಕಾಗಿ ಶ್ರಮಿಸುವುದರ ಜೊತೆಗೆ, ಅವರ ಆಧ್ಯಾತ್ಮಿಕ ಗುರು ಶ್ರೀರಾಮಕೃಷ್ಣ ಪರಮಹಂಸರ ಸಂದೇಶವನ್ನು ವಿಶ್ವಾದ್ಯಂತ ಹರಡುವುದಕ್ಕೆ ನಿಷ್ಠವಾಗಿದೆ. ಮಠದ ಸ್ಥಾಪನೆಯಾಗಿ ನೂರು ವರ್ಷಗಳು ಕಳೆದ ನಂತರವೂ ಅದು ಇನ್ನೂ ಜನರ ಅಪಾರ ಮೆಚ್ಚುಗೆಯನ್ನು ಗಳಿಸುತ್ತಿರುವುದು ವಿವೇಕಾನಂದರ ದಾರ್ಶನಿಕತೆಗೆ ಸಲ್ಲುವ ಗೌರವವಾಗಿದೆ. ಜಗತ್ತಿನಾದ್ಯಂತ ಈ ಸಂನ್ಯಾಸಿ ಮಠ ೧೭೩ ಶಾಖೆಗಳನ್ನು ಹೊಂದಿದ್ದು, ಈ ಪೈಕಿ ೧೨೮ ಭಾರತದಲ್ಲಿವೆ. ಮೌಲ್ಯಾಧಾರಿತ ಶಿಕ್ಷಣ, ಸಂಸ್ಕೃತಿ, ಆರೋಗ್ಯ, ಮಹಿಳಾ ಸಬಲೀಕರಣ, ಯುವಜನತೆ ಹಾಗೂ ಗುಡ್ಡಗಾಡು ಜನರ ಕಲ್ಯಾಣ, ಪರಿಹಾರ ಮತ್ತು ಪುನರ್ವಸತಿ ಮುಂತಾದ ಕ್ಷೇತ್ರಗಳಲ್ಲಿ ರಾಮಕೃಷ್ಣ ಮಠ ಮಾಡುತ್ತಿರುವ ಶ್ಲಾಘನೀಯ ಕಾರ್ಯಕ್ಕೆ ವ್ಯಾಪಕ ಮಾನ್ಯತೆ ದೊರೆತಿದೆ.

ಸ್ವಾಮಿ ವಿವೇಕಾನಂದರ ಜನ್ಮದಿನದ ೧೫೦ನೆಯ ವಾರ್ಷಿಕೋತ್ಸವವು ರಾಮಕೃಷ್ಣ ಮಠವು ಕೈಗೊಂಡಿರುವ ಚಟುವಟಿಕೆಗಳು ಮತ್ತು ಉತ್ತಮ ಕಾರ್ಯಗಳನ್ನು ವಿಸ್ತರಿಸುವುದಕ್ಕೆ ಒಂದು ಸುವರ್ಣಾವಕಾಶದ ಸಂದರ್ಭವಾಗುವುದು ಎಂದು ನಾನು ಕಳಕಳಿಯಿಂದ ಆಶಿಸುತ್ತೇನೆ. ಈ ಉದಾತ್ತ ಸಂಸ್ಥೆಯ ಗುರಿಗಳ ಈಡೇರಿಕೆಗೆ ನಮ್ಮ ಸರ್ಕಾರದ ಸಂಪೂರ್ಣ ಬೆಂಬಲ ಮತ್ತು ಸಹಕಾರದ ಭರವಸೆಯನ್ನು ನಾನು ಈ ಮೂಲಕ ನೀಡುತ್ತೇನೆ.

**೧೫೦ ನೆಯ ಜನ್ಮದಿನದ ಸಂಸ್ಮರಣೋತ್ಸವ:** ಸ್ವಾಮಿ ವಿವೇಕಾನಂದರ ೧೫೦ನೆಯ ಜನ್ಮದಿನದ ಸಂಸ್ಮರಣೋತ್ಸವದ ನಿರ್ವಹಣೆಗೆ ಮಾರ್ಗದರ್ಶನ ನೀಡಲು ಭಾರತ ಸರ್ಕಾರವು ಪ್ರಧಾನಮಂತ್ರಿಯವರ ಅಧ್ಯಕ್ಷತೆಯಲ್ಲಿ ರಾಷ್ಟ್ರೀಯ ಸಮಿತಿಯೊಂದನ್ನು ರಚಿಸಿದೆ.

೨೦೧೦ರಲ್ಲಿ ನಡೆದ ಸಮಿತಿಯ ಮೊದಲ ಸಭೆಯಲ್ಲಿ, ಈ ವಾರ್ಷಿಕೋತ್ಸವದ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರ ಬೋಧನೆಗಳನ್ನು ಜನಪ್ರಿಯಗೊಳಿಸಲು ಕೈಗೊಳ್ಳಬೇಕಾದ ಕಾರ್ಯಕ್ರಮಗಳು ಮತ್ತು ಚಟುವಟಿಕೆಗಳ ಬಗ್ಗೆ ಅನೇಕ ರಚನಾತ್ಮಕ ಸಲಹೆಗಳನ್ನು ನೀಡಲಾಯಿತು. ಸ್ವಾಮಿ ವಿವೇಕಾನಂದರ ಸಮಗ್ರ ಕೃತಿಗಳ ಪ್ರಕಟಣೆ, ಅವರ ಬೋಧನೆಗಳನ್ನು ಕುರಿತ ಅಂತರರಾಷ್ಟ್ರೀಯ ಸಮ್ಮೇಳನಗಳು ಮತ್ತು ವಿಚಾರಗೋಷ್ಠಿಗಳು, ವಿಶ್ವವಿದ್ಯಾಲಯಗಳಲ್ಲಿ ಪೀಠಗಳ ಸ್ಥಾಪನೆ, ವಾರ್ಷಿಕ ಉಪನ್ಯಾಸಗಳು, ಅಂತರಧರ್ಮೀಯ ಸಂವಾದಗಳ ಬಗ್ಗೆ ಸಂಶೋಧನೆಗೆ ಪ್ರೋತ್ಸಾಹ ಹಾಗೂ ಭಾರತದಲ್ಲಿ ಸ್ವಾಮಿ ವಿವೇಕಾನಂದರು ಕೈಗೊಂಡ ಸಂಚಾರಗಳ ನೆನಪಿಗಾಗಿ ರಾಜ್ಯಗಳು ಮತ್ತು ಸ್ಥಳೀಯ ಸಂಸ್ಥೆಗಳನ್ನು ತೊಡಗಿಸುವುದು ಈ ಸಲಹೆಗಳಲ್ಲಿ ಸೇರಿವೆ. ಈ ವಿಚಾರಗಳು ಶೀಘ್ರದಲ್ಲೇ ಸ್ಪಷ್ಟವಾದ ಕಾರ್ಯಯೋಜನೆಗಳಾಗಿ ರೂಪುಗೊಳ್ಳುತ್ತವೆ ಹಾಗೂ ಇವು ೨೦೧೩ನೇ ವರ್ಷದಲ್ಲಿ ಅನುಷ್ಠಾನಕ್ಕೆ ಸಿದ್ಧವಾಗುತ್ತವೆ ಎಂದು ನಾನು ನಿರೀಕ್ಷಿಸುತ್ತೇನೆ. ಸಾರ್ವಜನಿಕ ಸೇವಾ ಪ್ರಸಾರ ಟ್ರಸ್ಟ್‌ನಿಂದ ಸ್ವಾಮಿ ವಿವೇಕಾನಂದರನ್ನು ಕುರಿತ ಚಲನಚಿತ್ರದ ತಯಾರಿಕೆಗೆ ಭಾರತ ಸರ್ಕಾರ ಈಗಾಗಲೇ ಅನುಮೋದನೆ ನೀಡಿದೆ.

ಚಿಕಾಗೋದಲ್ಲಿ ಸ್ವಾಮಿ ವಿವೇಕಾನಂದರು ಮಾಡಿದ ಭಾಷಣದ ಸಂಸ್ಮರಣೆಗೆ ನಾವು ವಿಶೇಷ ಪ್ರಯತ್ನಗಳನ್ನು ಮಾಡಬೇಕಾಗಿದೆ. ಈ ಐತಿಹಾಸಿಕ ಭಾಷಣ ನಡೆದ ಚಿಕಾಗೊ ನಗರದ ಆರ್ಟ್ ಇನ್ಸ್ಟಿಟ್ಯೂಟ್ ಎಂಬ ಕಟ್ಟಡದಲ್ಲಿ ಒಂದು ಫಲಕವಿದೆಯೆಂದೂ, ಅದು ಇರುವ ರಸ್ತೆಯ ಒಂದು ಭಾಗಕ್ಕೆ **'ಸ್ವಾಮಿ ವಿವೇಕಾನಂದ ರಸ್ತೆ'** ಎಂಬ ಹೆಸರನ್ನು ಚಿಕಾಗೋ ನಗರವು ಈಗಾಗಲೇ ಇಟ್ಟಿದೆಯೆಂದೂ ನನಗೆ ತಿಳಿದುಬಂದಿದೆ. ಚಿಕಾಗೊ ನಗರದಲ್ಲಿ ಸೂಕ್ತ ಸ್ಮಾರಕ ಕಾರ್ಯಕ್ರಮವೊಂದನ್ನು ನಡೆಸುವ ಬಗ್ಗೆಯೂ ನಾವು ಕ್ರಮ ಕೈಗೊಂಡಿದ್ದೇವೆ.

**ಶಿಕ್ಷಣವನ್ನು ಕುರಿತ ಸ್ವಾಮೀಜಿಯವರ ಅಭಿಪ್ರಾಯಗಳು:** ಶಿಕ್ಷಣ ಕುರಿತಂತೆ ಸ್ವಾಮಿ ವಿವೇಕಾನಂದರು ಬಹಳ ನಿರ್ದಿಷ್ಟವಾದ ಮತ್ತು ಪ್ರಬುದ್ಧವಾದ ಅಭಿಪ್ರಾಯಗಳನ್ನು ಹೊಂದಿದ್ದರು. ಭಾರತೀಯ ಸಮಾಜದ ಪುನರ್ನಿರ್ಮಾಣಕ್ಕೆ ಶಿಕ್ಷಣವು ಪ್ರಾಥಮಿಕ ಸಾಧನ ಎಂದು ಅವರು ಗ್ರಹಿಸಿದ್ದರು. ಅವರು ಒಮ್ಮೆ ಹೀಗೆ ಹೇಳಿದ್ದರು: "ಜೀವನ ಹೋರಾಟಕ್ಕೆ ಸಾಮಾನ್ಯ ಜನಸಮೂಹವನ್ನು